**ಉಪ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಉಪನಿರ್ದೇಶಕರು (ಈ-ಆಸ್ಪತ್ರೆ) ಈ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹತೆಯ ವಿವರ**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಉಪ ನಿರ್ದೇಶಕರು (ಈ-ಆಸ್ಪತ್ರೆ) ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಇಚ್ಛೆವುಳ್ಳ ವೈದ್ಯರು/ತಜ್ಞರು ಈ ಕೆಳಕಂಡ ಮಾನದಂಡಗಳನ್ವಯ ಅರ್ಹರಿದ್ದಲ್ಲಿ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಅದರಲ್ಲಿಯ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.

1) ಸರ್ಕಾರದ ಆದೇಶ ಸಂ. ಆಕುಕ 82 ಎಂಎಸ್‌ಎಸ್ 2011, ದಿನಾಂಕಃ 02.06.2011ರಲ್ಲಿಯ ಕ್ರಮ ಸಂ.4ರಲ್ಲಿಯ ಉಪ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡುವಾಗ ಅನುಸರಿಸಬೇಕಾದ ಮಾನದಂಡಗಳು.

ಎ) ನಿಯತಕಾಲಿಕವಾತಿ ನೇಮಕಗೊಂಡು ಕನಿಷ್ಠ ಇಪ್ಪತ್ತು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಉಪ ಮುಖ್ಯ ವೈದ್ಯಾಧಿಕಾರಿ ಅಥವಾ ಹಿರಿಯ ತಜ್ಞರು ಪರಿಗಣನೆಗೆ ಅರ್ಹರಾಗಿರುತ್ತಾರೆ. ಆ ಪೈಕಿ ಜಿಲ್ಲಾ ಮಟ್ಟದ ಕಾರ್ಯಕ್ರಮಾಧಿಕಾರಿಯಾಗಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.

ಬಿ) ಅಧಿಕಾರಿಯು ಉತ್ತಮ ಸೇವಾ ದಾಖಲೆ ಹೊಂದಿದ್ದು, ಯಾವುದೇ ಇಲಾಖಾ ವಿಚಾರಣೆ/ಕ್ರಿಮಿನಲ್ ವಿಚಾರಣೆ ಇರಕೂಡದು.

2) ಮತ್ತು ಸಂ. ಆಕುಕ 112 ಹೆಚ್‌ಎಸ್‌ಹೆಚ್ 2013 (ಭಾಗ), ದಿನಾಂಕಃ 21.06.2014ರಲ್ಲಿ ತಿದ್ದುಪಡಿ

ಸರ್ಕಾರದ ಆದೇಶ ಸಂ. ಆಕುಕ 82 ಎಂಎಸ್‌ಎಸ್ 2011, ದಿನಾಂಕಃ 02.06.2011ರಲ್ಲಿಯ ಮಾನದಂಡದ ಕ್ರಮ ಸಂ. 4(ಎ)ರಲ್ಲಿ ನಿಯತಕಾಲಿಕವಾಗಿ ನೇಮಕಗೊಂಡು ಎಂಬ ಪದಗಳ ಬದಲಿಗೆ ನಿಯತಕಾಲಿಕವಾಗಿ ನೇಮಕಗೊಳ್ಳುವ ಮೊದಲು ಸಲ್ಲಿಸಿದ ಒಟ್ಟಾರೆ ಗುತ್ತಿಗೆ ಸೇವಾವಧಿಯನ್ನು ಒಳಗೊಂಡಂತೆ ಎಂದು ಓದಿಕೊಳ್ಳತಕ್ಕದ್ದು.

ಮತ್ತು

3) Masters in Health Administration/Masters in Hospital Administration/ Masters in Public Health Course ನ್ನು ಮಾಡಿರತಕ್ಕದ್ದು.

4) ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಹೆಚ್ಚಿನ ನೈಪುಣ್ಯತೆ/ಪ್ರಮಾಣ ಪತ್ರ ಹೊಂದಿರುವವರಿಗೆ ಆದ್ಯತೆಯನ್ನು ನೀಡಲಾಗುವುದು.

30/10

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕು.ಕ ಸೇವೆಗಳು
ಬೆಂಗಳೂರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಉಪ ನಿರ್ದೇಶಕರು (ಈ-ಆಸ್ಪತ್ರೆ) ಹುದ್ದೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವ ನಮೂನೆ

| | | |
|---|---|---|
| 1. | ಹೆಸರು, ಪದನಾಮ ಮತ್ತು ಕಾರ್ಯನಿರತ ಸ್ಥಳ | |
| 2 | ವಿದ್ಯಾರ್ಹತೆ | |
| 3 | ಜನ್ಮ ದಿನಾಂಕ | |
| 4 | ಸೇವೆಗೆ ಸೇರಿದ ದಿನಾಂಕಃ ಗುತ್ತಿಗೆ<br>ಖಾಯಂ | |
| 5 | ಪ್ರಸಕ್ತ ಸ್ಥಳದಲ್ಲಿ ಕಾರ್ಯನಿರತ ದಿನಾಂಕ | |
| 6 | ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿದ್ದಲ್ಲಿ ಆದೇಶ ಸಂಖ್ಯೆ ಮತ್ತು ದಿನಾಂಕ | |
| 7 | ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಹೆಚ್ಚಿನ ತರಬೇತಿ ಹೊಂದಿರುವ ಕೋರ್ಸುಗಳ ವಿವರ (ಪ್ರಮಾಣ ಪತ್ರ ಸಲ್ಲಿಸುವುದು) | |
| 8 | ಪತಿ/ಪತ್ನಿ ಸರ್ಕಾರಿ ನೌಕರರಾಗಿದ್ದಲ್ಲಿ ವಿವರ | |

ವೈದ್ಯರು/ತಜ್ಞರ ಸಹಿ ಮತ್ತು ಮೊಹರು